**SC No. 109/2016**
**P.W. 23**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 109/2016 P.W. 23**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **27.03.2026** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **MG** ವಕೀಲರಿಂದ :

1. ನನ್ನನ್ನು ಈ ಪ್ರಕರಣದ ಆರೋಪಿ ಪತ್ತೆಗಾಗಿ ನೇಮಿಸಿದ್ದ ಡಿ.ಸಿ.ಪಿ. ಹೆಸರು ಬೋರಲಿಂಗಯ್ಯ. ಯಾವುದೇ ಲಿಖಿತ ಆದೇಶ ಮಾಡಿರಲಿಲ್ಲ ಎಂದರೆ ಸರಿ ಅಲ್ಲ. ಮೇಮೋ ಕಳುಹಿಸಿದ್ದರು. ಸದರಿ ಮೇಮೋವನ್ನು ನಾನು ತನಿಹಾಧಿಕಾರಿಡಿಗೆ ನೀಡಿರಲಿಲ್ಲ ಎಂದರೆ ಸರಿ ಅಲ್ಲ. ನನಗೆ ಯಾವುದೇ ಮೇಮೋ ಅಥವಾ ಲಿಖಿತ ಆದೇಶ ನೀಡಿರಲಿಲ್ಲ ಎಂದರೆ ಸರಿ ಅಲ್ಲ. ದಿನಾಂಕ 19.01.2016 ರಂದು ಬೆಂಗಳೂರವನ್ನು ವಿಮಾನದಲ್ಲಿ ಬಿಟ್ಟಿದ್ದು ಕುರುಕ್ಷೇತ್ರವನ್ನು ಅದೇ ದಿನ ತಲುಪಿದೆ. ನನಗೆ ಮೇಮೋ ಬಂದ ಸಮಯದಲ್ಲಿ ನಾನು ಕುರುಕ್ಷೇತ್ರದಲ್ಲಿ ಇದ್ದೆ. ದಿನಾಂಕ 20.01.2016 ರ ಬೆಳಗ್ಗೆ 11.00 ಗಂಟೆಗೆ ಆರೋಪಿ ಪತ್ತೆಗೆ ಹೋದೆ. ನಾನು ಸಂಜೆ ಪಲ್ವಳ್ ಗೆ ತಲುಪಿದೆ. ನಾವು ದಿನಾಂಕ 21.01.2016 ರ ಬೆಳಗ್ಗೆ 5.30 ಕ್ಕೆ ಆರೋಪಿಯ ಮನೆಗೆ ಹೋಗಿ ಆತನ ವಶಕ್ಕೆ ಪಡೆದೆ. ಅಲ್ಲಿನ ಸ್ಥಳೀಯ ಪೊಲೀಸರನ್ನು ಕರೆದುಕೊಂಡು ಹೋಗಿದ್ದೆ. ಅದರ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ. ನಾನು ಆ ವ್ಯಾಪ್ತಿಯ ಪೊಲೀಸರಿಗೆ ಮಾಹಿತಿ ನೀಡಿಲ್ಲ ಎಂದರೆ ಸರಿ ಅಲ್ಲ. ಆಗ ಆ ಠಣೆಯಲ್ಲಿ ಇದ್ದ ಪಿ.ಎಸ್.ಐ. ರವರ ಹೆಸರು ನೆನಪಿಲ್ಲ.

2. ನಿಶಾನೆ. ಪಿ. 31 ರಲ್ಲಿ ಹರಿಯಾಣ ಪೊಲೀಸರ ಸಹಾಯ ಪಡೆದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ ಅಲ್ಲ. ನಿಶಾನೆ.ಪಿ. 31 ರಲ್ಲಿ ಹರಿಯಾಣದ ಹತ್ತಿನ್ ಪೊಲೀಸ್ ಠಾಣೆಯ ಸಿಬ್ಬಂದಿ ಹೆಸರನ್ನು ನಮೂದು ಮಾಡಿಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿದ ಬಗ್ಗೆ ಮಾತ್ತು ಅಮಾನತು ಮಹಜರ್ ಮಾಡಿದ್ದು ಆ ವ್ಯಾಪ್ತಿಯ ಪಂಚರ ಸಹಿಗಳನ್ನು ಮತ್ತು ಪೊಲೀಸರ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿ ಅಲ್ಲ. ಸದರಿ ಮಹಜರ್ ಗಳ ಪಂಚರು ಹರಿಯಾ ರಾಜ್ಯ ಅಥವಾ ಹತ್ತಿನ್ ನ ಠಾಣಾ ವ್ಯಾಪ್ತಿಯ ಸ್ಥಳೀಯರು ಅಲ್ಲ

ಎಂದರೆ ಸರಿ. ನಿಶಾನೆ.ಪಿ. 32 ರಲ್ಲಿ ಸ್ಥಳೀಯ ಸಾಕ್ಷಿಗಳ ಹೆಸರು ಅಥವಾ ಸಹಿ ಇಲ್ಲ ಎಂದರೆ ಸರಿ. ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ನಾನು ಆಂಗ್ಲ ಭಾಷೆಯಲ್ಲಿ ಪಡೆದಿದ್ದೇನೆ. ಆರೋಪಿ ಯಾವುದೇ ಸ್ವ-ಇಚ್ಛಾ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ ಅಲ್ಲ. ಆರೋಪಿ ಸ್ವ-ಇಚ್ಛಾ ಹೇಳಿಕೆ ಆಧಾರದ ಮೇಲೆ ಯಾವುದೇ ಜಪ್ತಿ ಮಹಜರ್ ಮಾಡಿಲ್ಲ ಎಂದರೆ ಸರಿ ಅಲ್ಲ. ಮು.ಮಾ. 16 ರಿಂದ 22 ಗಳು ಆಗಲೇ ಪೊಲೀಸರ ವಶದಲ್ಲಿ ಇದ್ದು ಅವುಗಳನ್ನು ಈ ಪ್ರಕರಣದಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ನಾನು ಸ್ಥಳೀಯ ನ್ಯಾಯಾಧೀಶರಿಂದ ಪಡೆದಿದ್ದ Transit Warrant ಅನ್ನು ತನಿಖಾಧಿಕಾರಿಗೆ ನೀಡಿದ್ದೇನೆ.

3. ದಿನಾಂಕ 21.01.2016 ರಂದು ನಾನು ಆರೋಪಿಯನ್ನು ಹತ್ತೀನ್ ಠಾಣಾ ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆಗೆ ಹಾಜರು ಪಡಿಸಿಲ್ಲ ಎಂದರೆ ಸರಿ ಅಲ್ಲ. ನಾನು ಆ ಆಸ್ಪತ್ರೆಯ ದಾಖಲೆಗಳನ್ನು ತನಿಖಾಧಿಕಾರಿಗೆ ಮತ್ತು ನ್ಯಾಯಾಲಯಕ್ಕೆ ನೀಡಿದ್ದೇನೆ. ನಾನು ಆರೋಪಿಯನ್ನು ಆತನ ಮನೆಯಿಂದ ದಸ್ತಗಿರಿ ಮಾಡಿಲ್ಲ ಮತ್ತು ಬೇರೆ ಕಡೆಯಿಂದ ವಶಕ್ಕೆ ಪಡೆದಿದ್ದೇನೆ ಎಂದೆರ ಸರಿ ಅಲ್ಲ. ನಿಶಾನೆ.ಪಿ. 30 ಮತ್ತು 31 ಅನ್ನು ಆರೋಪಿಯನ್ನು ದಸ್ತಗಿರಿ ಮಾಡಿದ ಕಾಲದಲ್ಲಿ ತಯಾರು ಮಾಡಿಲ್ಲ ಎಂದರೆ ಸರಿ ಅಲ್ಲ. ಮು.ಮಾ. 16 ರಿಂದ 22 ಗಳನ್ನು ನಿಧಿ ಶರ್ಮ ರವರಿಗಂಡ ಪಡೆದಿದ್ದೇನೆ ಎಂದರೆ ಸರಿ ಅಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.